ನೆಕ್ಸ್ಟ್ ಮಂಥ್ ಕ್ಯಾಲಿಫೋರ್ನಿಯಾದಲ್ಲಿ, ನಮ್ಮ ಕನ್ನಡ ಸಂಘದಿಂದ' ಅಂದಾಗ ಮಠವೇ ಬಿದ್ದು ಹೋಗುವಷ್ಟು ಭರ್ಜರಿ ಚಪ್ಪಾಳೆ. ಹುಡುಗನಿಗೆ ಚಪ್ಪಾಳೆ ಇಕ್ಕಲಾಗದಷ್ಟು ನಿತ್ರಾಣ. ಗಾಬರಿಬಿದ್ದ ತನ್ನಿಂದ ಆ ಪ್ರೋಗ್ರಾಮ್‌ಗೆ ವಿಮಾನ ಏರಿ ಹೋಗಲು ಸಾಧ್ಯವೆ ಎಂದು ಚಿಂತಿಸುತ್ತಾ ಬೃಂದಾವನಕ್ಕೆ ಶಿರಸಾಷ್ಟಾಂಗ ಹಾಕಿದ. ರಾಯರನ್ನು, ಹುಡುಗಿ ಸೂಟಿನವನೊಂದಿಗೆ ಕಾರಲ್ಲಿ ಹೋಗುವುದನ್ನು ಏಕಕಾಲದಲ್ಲಿ ವೀಕ್ಷಿಸಿ ಹೊಟ್ಟೆಗೆ ಹಾಲೊಯ್ದುಕೊಂಡ. ತಾನು ಧಾರೆಎರೆದ ವಿದ್ಯೆಯೇ ಅವಳನ್ನು ತನ್ನಿಂದ ಕಸಿದುಕೊಳ್ಳುತ್ತದೆಂದು ತಿಳಿದಿದ್ದರೆ ತಾನವಳಿಗೆ ವಿದ್ವತ್ ಪರೀಕ್ಷೆಗೇ ಕೂರಿಸುತ್ತಿರಲಿಲ್ಲವೆಂದು ರಾತ್ರಿಯೆಲ್ಲಾ ಹೊರಳಾಡಿ ನರಳಿದ. 'ಯಾಕೋ ಊಟ ಮಾಡಲಿಲ್ಲ?... ಹೊಟ್ಟೆ ಖಾಲಿ ಇಟ್ಟರೆ ನಿದ್ದೆ ಬಂದೀತೇನೋ?' ಅಜ್ಜನ ಗೊಣಗಾಟ. 'ನಿನಗಿನ್ನೇನು ಬರೀ ಮೂರು ಹೊತ್ತೂ ಊಟ ನಿದ್ದೆಯದ್ದೇ ಚಿಂತೆ... ಸುಮ್ನೆ ಮಲಕ್ಕೋ ತಾತ... ರೇಗಿಸ್ಬೇಡ' ಎಂದು ಗದ್ಗದಿತನಾದ.

ಹುಡುಗಿ ಶಾಲೆಯತ್ತ ಸುಳಿಯಲಿಲ್ಲ! ಬೀದಿಯಲ್ಲಿರುವ ಮಾರ್ಕೆಟ್, ಆಂಜನೇಯ, ಶಂಕರ, ನರಸಿಮ್ಮ ದೇವ್ರು, ಪಾಂಡುರಂಗರಿಗೆಲ್ಲಾ ಕಾಯಿ ಒಡೆಸಿದ. ಖಾಸಿಂ ವಲಿ ದರ್ಗಾಕ್ಕೂ ಸಕ್ಕರೆ ಓದಿಸಿದ. ಬಾಡಿಗೆ ಸೈಕಲ್ ತೆಗೆದುಕೊಂಡು ಅವಳ ಮನೆಯತ್ತ ಪೇರಿ ಹೊಡೆದ. ಎದೆಯಲ್ಲಿ ಗೆದ್ದಲು ಹಿಡಿದಿದ್ದರೂ ನಗುನಗುತ್ತಾ ಹುಡುಗಿಯರಿಗೆಲ್ಲಾ ಟ್ಯೂಶನ್ ಮಾಡಿದ. ಇವನು ದಿನವೆಲ್ಲಾ ಚಮಕಾಯಿಸುವುದನ್ನು ಕಂಡಿದ್ದ ಹುಡುಗಿಯರಿಗೆ ಇವನ ಹ್ಯಾಪ್ ಮೋರೆ ಕಂಡು ಕನಿಕರ. 'ಸಾ, ಅವಳು ಆದವಾನಿ ಎಂಜಿನಿಯರ್‌ನ ಮದುವೆ ಆಗ್ತಾಳಂತ್ಸಾ' ರಾಧಿಕಾ ತೊದಲ್ನುಡಿದಳು. ಅವಳನ್ನೇ ದುರುಗುಟ್ಟಿದ. 'ಇಂಪಾಸಿಬಲ್, ನನ್ನ ಹುಡುಗಿಯ ಮನಸ್ಸು ಈ ಮಡಿಕೋಲಿಗೇನು ಗೊತ್ತು? ಸಾಲಿಗ್ರಾಮ ಹಿಡಿದು ಆಣೆ ಮಾಡ್ಸಿಲ್ಲವೆ. ಸುಳ್ಳಾದಲ್ಲಿ ಸುಟ್ಟು ಭಸ್ಮವಾದಾಳು' ಮನದಲ್ಲೇ ಅಂದುಕೊಂಡು ಧೈರ್ಯಕ್ಕಾಗಿ ಬೇಡಿದ.

ವಾರವಾಯಿತು, ಹುಡುಗಿ ನಾಪತ್ತೆ. ತಾಳ್ಮೆಗೆಟ್ಟು ಅವಳ ಮನೆಗೆ ಹೋದ. ಬಾಗಿಲಲ್ಲೇ ಅವಳ ತಾಯಿ ತಡೆದಳು. 'ಅವಳಿಗೆ ಪಾಠ ಸಾಕು ಮೇಷ್ಟ್ರೆ' ಗದರುವ ಪರಿ ಹೇಳಿದಳು. 'ನೋಡಬೇಕಿತ್ರೀ ಅವಳ್ನ ಜಾನಕಮ್ಮಾರೇ' ಅಂದ. 'ಅವಳೆಲ್ಲೋ ಹೊರಗಡೆ ಹೋಗಿದಾಳೆ. ಬಂದ್ಮೇಲೆ ಕಳಿಸ್ತೀನಿ. ಈಗ ಹೋಗಿ' ಅಂದವಳೇ ರಪ್ಪನೆ ಬಾಗಿಲು ಮುಚ್ಚಿಕೊಂಡಳು. ಒಳಗೆ ಕುಲುಕುಲು ನಗೆ ಕೇಳಿ ಬಂತು. ಶುಭ ಪಂತುವರಾಳಿ ನಗೆ ಇವನಿಗೆ ತಿಳಿಯದೆ. ಯಾರೋ ಒಬ್ಬ ಅಪಸ್ವರದಲ್ಲಿ ನಗುತ್ತಿದ್ದಾನಲ್ಲ ಎಂದುಕೊಳ್ಳುತ್ತಾ ಮ್ಯೂಸಿಕ್ ಸೆಂಟರ್‌ನತ್ತ ಹೆಜ್ಜೆ ಹಾಕಿದ. ಶೇವಿಂಗ್ ಮಾಡಿಸಲೂ ಮನಸ್ಸಾಗದೆ ಗಡ್ಡ ಬೆಳೆಸಿದ. ಇದ್ದಕ್ಕಿದ್ದಂತೆ ಒಂದು ದಿನ ರೇಶಿಮೆ ಲಂಗದ ನಿರಿಗೆ ಚಿಮ್ಮುತ್ತಾ, ಮಂಜಿನಲ್ಲಿ ಮಿಂದ ಗುಲಾಬಿಯಂತೆ ನಳನಳಿಸುತ್ತಾ ಹುಡುಗಿ ಬಂದಳು. ಹುಡುಗನೀಗ ತಬ್ಬಿಬ್ಬು. ತಮ್ಮಿಬ್ಬರ ಮಧ್ಯೆ ಮಲಗಿದ್ದ ವೀಣೆಯನ್ನವಳೇ ಬದಿಗೆತ್ತಿಟ್ಟಳು. 'ಪಲ್ಲವಿ, ಅನುಪಲ್ಲವಿ, ಚರಣ ಬೇಕೆ?' ಎಂದು ಉಸಿರು ತಾಕುವಷ್ಟು ಸನಿಹವಾದಾಗ ದೂರ ತಳ್ಳಿಬಿಟ್ಟ. 'ಓಹ್! ಚಿಟ್ಟೆ ಸ್ವರ ಬೇಕೆ?' ಅವನ ಮೇಲೆಲ್ಲಾ ಕಂಗಳ ಹರಿದಾಡಿಸಿದಳು. 'ನನಗೆ ನಿನ್ನ ಪ್ರೇಮ ಬೇಕು ಕಣೆ' ಎಂದು ಪಿಸುಗಿದ, ಮುನಿದ ಅವನ ಮುಖವನ್ನು ಬೊಗಸೆಯಲ್ಲಿ ಬಾಚಿ ಎದೆಗೊತ್ತಿಕೊಂಡಳು. 'ನೋ... ನೋ ಇದು ಕಾಮ' ಮುಸು ಮುಸು ಅತ್ತ. 'ನೀನು ನನಗಿಂತ ಚಿಕ್ಕವನು ಮರಿ... ಟೇಕ್ ಇಟ್ ಈಸಿ' ತಲೆ ಸವರಿದಳು. 'ನಾನು ಮರಿಯಲ್ಲ... ನಿನ್ನ ಗುರು' ನಿಡುಸುಯ್ದ.

'ಗುರುವಿನ ಬಳಿ ಹೀಗಾಡಿದ್ದು ನಂದೇ ತಪ್ಪು' ಅಂದಳು ಹುಡುಗಿ. 'ಮದುವೆಯಾದ್ರೆ ತಪ್ಪು ಸರಿ ಹೋಗುತ್ತೆ' ಮುಖ ಊದಿಸಿದ. 'ಯು ಆರ್ ಕರೆಕ್ಟ್. ಅದಕ್ಕೆ ನಾನು ಮದುವೆಯಾಗುವ ನಿರ್ಧಾರಕ್ಕೆ ಬಂದಿದ್ದೀನಿ ಸರ್' ಅಂದಳು. 'ಯಾವಾಗ?' ಇವನು ಕಣ್ಣರಳಿಸಿದ. 'ಆದಷ್ಟು... ಬೇಗ' ಎಂದು ಲಂಗ ಕೊಡವಿಕೊಂಡೆದ್ದು ಮೇಲೇರಿದ್ದ ಬ್ಲೌಸನ್ನು ಕೆಳಗೆಳೆದುಕೊಂಡು ದುಡುದುಡು ಹೊರಟೇ ಹೋದಳು.